ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU CITY UNIVERSITY
Office of the Registrar, Central College Campus, Dr. B.R Ambedkar Veedhi,
Bengaluru – 560 001.Ph.No.080-22961015 / 22131384, E-mail: bcuccb@gmail.com

ಸಂಖ್ಯೆ:ಬೆಂ.ನ.ವಿ/ಕೋ.ಲಸಿಕೆ/ /2021–22 ದಿನಾಂಕ:08.07.2021

## ಸುತ್ತೋಲೆ – 3

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜಿತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಬೆಂಬಲಿತ ಸಿಬ್ಬಂದಿಗಳಿಗೆ ಲಸಿಕಾಕರಣ ನಡೆಸುವ ಬಗ್ಗೆ **ದಿನಾಂಕ:08.07.2021 ರಂದು ಅಪರಾಹ್ನ 1.00 ಗಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು & ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ K-SWAN Virtual Conference ನಲ್ಲಿ ನೀಡಿರುವ ಸೂಚನೆಗಳನ್ನು ಅನುಷ್ಠಾನಗೊಳಿಸುವ ಕುರಿತು ದಿನಾಂಕ:09.07.2021 ರಂದು ಆನ್‌ಲೈನ್ ಸಭೆ ನಡೆಸುವ ಬಗ್ಗೆ.**

ಉಲ್ಲೇಖ:
1. ದಿನಾಂಕ:08.07.2021 ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಕೋವಿಡ್ ಲಸಿಕಾಕರಣದ ಬಗ್ಗೆ ಕಾಲೇಜು ಮಟ್ಟದಲ್ಲಿ ನೀಡಿರುವ ಸೂಚನೆಗಳು
2. ಕುಲಪತಿಗಳ ಅನುಮೋದನೆ ದಿನಾಂಕ:08.07.2021

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿರುವ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ (ಅನುದಾನಿತ, ಖಾಸಗಿ, ಸರ್ಕಾರಿ, Autonomous) ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಬೆಂಬಲಿತ ಸಿಬ್ಬಂದಿಗಳಿಗೆ ಕಾಲೇಜು ಮಟ್ಟದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಗಳ ಸಹಕಾರದಿಂದ ಕೋವಿಡ್–19 ಲಸಿಕಾಕರಣವನ್ನು ಏರ್ಪಡಿಸಿ, ಎಲ್ಲರಿಗೂ ಲಸಿಕೆಯನ್ನು ನೀಡುವಂತೆ ಸೂಚಿಸಿ ಈಗಾಗಲೇ 2 ಸುತ್ತೋಲೆಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ಹೊರಡಿಸಲಾಗಿತ್ತು.

ಸುತ್ತೋಲೆಯ ಜೊತೆಗೆ ಪ್ರತಿನಿತ್ಯ ಕೋವಿಡ್ ಲಸಿಕಾಕರಣದ ಬಗ್ಗೆ ಪ್ರಗತಿಯನ್ನು Google Format ನಲ್ಲಿ ಸಂಜೆ 4.30 ಗಂಟೆಯ ಒಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಲಸಿಕಾಕರಣದ ವಿಶೇಷ ಅಭಿಯಾನದಲ್ಲಿ ಯಾವುದಾದರೂ ಅಡೆತಡೆಗಳು ಅಥವಾ ಮಾಹಿತಿ ಕೊರತೆ ಇದ್ದಲ್ಲಿ ವಿಶ್ವವಿದ್ಯಾನಿಲಯದಿಂದ 25 ಕಾಲೇಜುಗಳಿಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು ನೇಮಿಸಿ, ಅವರ ಮೊಬೈಲ್ ಸಂಖ್ಯೆಯನ್ನು ಈಗಾಗಲೇ ತಮಗೆ ನೀಡಿ ಸಂಪರ್ಕಿಸಲು ಸಹಾ ಸೂಚಿಸಲಾಗಿತ್ತು.

ಈ ವಿಷಯದಲ್ಲಿ ಈಗಾಗಲೇ ಕೆಲವು ಕಾಲೇಜುಗಳಲ್ಲಿ ಲಸಿಕಾಕರಣದ ವಿಶೇಷ ಅಭಿಯಾನವನ್ನು ಪ್ರಾರಂಭಿಸಿ, ಆ ಕಾಲೇಜಿನ ವಿದ್ಯಾರ್ಥಿಗಳು & ಸಿಬ್ಬಂದಿಗಳಿಗೆ ಲಸಿಕೆಯನ್ನು ನೀಡುತ್ತಿರುವ ಬಗ್ಗೆ ಆಯಾ ದಿನವೇ ಮಾಹಿತಿಯನ್ನು Google Format ನಲ್ಲಿ ಸಲ್ಲಿಸುತ್ತಿದ್ದೀರಿ. ಆದರೆ, ಅದರಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಗೂ, ಲಸಿಕೆ ಪಡೆದವರ ಸಂಖ್ಯೆಗೂ, ಲಸಿಕೆ ಪಡೆಯದೇ ಇರುವವರ ಸಂಖ್ಯೆಗೂ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಿಸಿರುವ ಮಾಹಿತಿಯನ್ನು ಪರಿಶೀಲಿಸಿದಾಗ ತಾಳೆಯಾಗುತ್ತಿಲ್ಲ.

ಇದುವರೆವಿಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಜರುಗಿರುವ ಲಸಿಕಾಕರಣ ವಿಶೇಷ ಅಭಿಯಾನದ ಪ್ರಗತಿಯನ್ನು ಪರಿಶೀಲಿಸಿದಾಗ, ಕೇವಲ ಶೇ. 24% ಪ್ರಗತಿಯಾಗಿರುವುದು ತಾವುಗಳು ಸಲ್ಲಿಸಿರುವ ಪ್ರಗತಿ ವರದಿಯಿಂದ ವ್ಯಕ್ತವಾಗಿರುತ್ತದೆ.

ದಿನಾಂಕ:08.07.2021 ರಂದು ಅಪರ ಮುಖ್ಯ ಕಾರ್ಯದರ್ಶಿಗಳು & ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ Vaccination Drive ಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಕುಲಪತಿಗಳೊಂದಿಗೆ ಪ್ರಗತಿ ಪರಿಶೀಲಿಸಿದಾಗ, ಪ್ರಗತಿ ಕುಂಠಿತವಾಗಿರುವುದನ್ನು ಮನಗಂಡು ಕಾಲೇಜುಗಳಲ್ಲಿ ಇರುವ ಪ್ರಾಂಶುಪಾಲರುಗಳು ಹಾಗೂ ಈ ಲಸಿಕಾಕಾರಣದ ಉದ್ದೇಶಕ್ಕಾಗಿ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ಆದ್ಯತೆಯ ಮೇರೆಗೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಲು ಸೂಚಿಸಿರುತ್ತಾರೆ.

ಸದರಿ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಅರಿತು ನಿಗಧಿಪಡಿಸಿರುವ ಕೊನೆಯ ದಿನಾಂಕವನ್ನು 07.07.2021 ರಿಂದ 15.07.2021 ರವರೆಗೆ ವಿಸ್ತರಿಸಿ, ಆ ಅವಧಿಯಲ್ಲಿ ಕಾಲೇಜುಗಳಿಗೆ ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳು & ಸಿಬ್ಬಂದಿಗಳಿಗೆ ಲಸಿಕೆಯನ್ನು ನೀಡಲು ಸೂಚಿಸಿರುತ್ತಾರೆ. Google Format ನಲ್ಲಿ ಮಾಹಿತಿ ನೀಡುವಾಗ ಸ್ಪಷ್ಟವಾಗಿ & ನಿಖರವಾಗಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ, ಕರ್ತವ್ಯದಲ್ಲಿ ನಿರತರಾಗಿರುವ ಬೋಧಕರು, ಬೋಧಕೇತರರ ಸಂಖ್ಯೆ ಇದರಲ್ಲಿ ಈಗಾಗಲೇ ಅಭಿಯಾನ ಪ್ರಾರಂಭಿಸುವ ಮೊದಲು ಅಂದರೆ ದಿನಾಂಕ:01.07.2021ಕ್ಕೆ ಮೊದಲು ಲಸಿಕೆ ಪಡೆದಿರುವವರ ಸಂಖ್ಯೆ, ಅಭಿಯಾನ ಪ್ರಾರಂಭಿಸಿದ ನಂತರ ಲಸಿಕೆ ಪಡೆದಿರುವವರ ಸಂಖ್ಯೆ, ಇನ್ನೂ ಲಸಿಕೆಗೆ ಬಾಕಿ ಇರುವವರ ಸಂಖ್ಯೆಗಳ ಮಾಹಿತಿಯನ್ನು ಪೂರ್ಣವಾಗಿ ನೀಡತಕ್ಕದ್ದು.

ಲಸಿಕಾಕರಣಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯ ಹೊರಗಿರುವ ಕಾಲೇಜುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿಗೆ ಸಹಕರಿಸಲು ಸೂಚಿಸಲಾಗಿದೆ.

ದಿನಾಂಕ:08.07.2021 ರಂದು ನಡೆದ ಲಸಿಕಾಕರಣದ ವಿಶೇಷ ಅಭಿಯಾನದಲ್ಲಿ ನೀಡಿದ ಸಲಹೆ-ಸೂಚನೆಗಳನ್ನು ಪಾಲಿಸಲು ದಿನಾಂಕ:09.07.2021 ರಂದು ಬೆಳಿಗ್ಗೆ 11.30 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರವರ ಸಮ್ಮುಖದಲ್ಲಿ Online meeting ನ್ನು ಏರ್ಪಡಿಸಲಾಗಿದ್ದು, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ಹಾಗೂ ಲಸಿಕಾಕರಣಕ್ಕಾಗಿ ನೇಮಕಗೊಂಡಿರುವ ನೋಡಲ್ ಅಧಿಕಾರಿಗಳು ಪೂರ್ಣ ಮಾಹಿತಿಯೊಂದಿಗೆ Online meeting ನಲ್ಲಿ ಭಾಗವಹಿಸಲು ಸೂಚಿಸಿದೆ. ಈ ಸುತ್ತೋಲೆಯಲ್ಲಿ ನೀಡಿರುವ ಸಲಹೆ, ಸೂಚನೆಗಳನ್ನು ಗಮನಕ್ಕೆ ತೆಗೆದುಕೊಂಡು, ಸದರಿ ಕಾರ್ಯಾಚರಣೆಯ ಯಶಸ್ವಿ ಅನುಷ್ಠಾನಕ್ಕಾಗಿ ತಮ್ಮ ಸಂಪೂರ್ಣ ಸಹಕಾರವನ್ನು ನೀಡಲು ಕೋರಲಾಗಿದೆ.

ಆದೇಶದ ಮೇರೆಗೆ,

8/7/21

ಕುಲಸಚಿವರು

ಗೆ,

ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು:-

1. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
4. ಲಸಿಕಾಕರಣದ ವಿಶೇಷ ಅಭಿಯಾನಕ್ಕೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ನೇಮಕಗೊಂಡಿರುವ ಎಲ್ಲಾ ನೋಡಲ್ ಅಧಿಕಾರಿಗಳು.
5. ಕಛೇರಿ ಪ್ರತಿ.

ಮಾಹಿತಿಗಾಗಿ:-

1. ಮಾನ್ಯ ಉಪ-ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು & ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಗಳ ಆಪ್ತ ಶಾಖೆಗೆ.

ಕುಲಸಚಿವರು

**ವಿ.ಸೂ: ಈ ಆನ್‌ಲೈನ್ ಸಭೆಯ ಲಿಂಕ್ ನ್ನು ದಿನಾಂಕ:09.07.2021 ರಂದು ನಡೆಯುವ ಸಭೆಯ ದಿನದ ಬೆಳಿಗ್ಗೆ ಮಿಂಚಿಂಚು (ಇ-ಮೇಲ್) ಮೂಲಕ ಕಳುಹಿಸಲಾಗುವುದು.**